# ಕೃಷಿ ಪ್ರಣತಿ

## ಸಿರಿ ಪ್ರಗತಿ

12/08/2022 - 18/08/2022

ಕೆಂಚನಹಳ್ಳಿ

## ಮುನ್ನುಡಿ

ಸಂಚಿಕೆ - 1



READY ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ನೈಜ ಜೀವನದ ಪರಿಸ್ಥಿತಿಯಲ್ಲಿ ಪ್ರಾಯೋಗಿಕ ಅನುಭವದ ಜೊತೆಗೆ ಗ್ರಾಮೀಣ ಪ್ರದೇಶಕ್ಕೆ ಒಡ್ಡಿಕೊಳ್ಳುವ ಅವಕಾಶವನ್ನು ರೂಪಿಸುತ್ತದೆ.ಜೊತೆಗೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಸಂವಹನ ಕೌಶಲ್ಯವನ್ನು ವೃದ್ಧಿಸಲು,ಸ್ಥಳೀಯ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳಲು ನೆರವಾಗುತ್ತದೆ.

- ಡಾ.ಎನ್.ಬಿ ಪ್ರಕಾಶ
ಡೀನ್ ( ಕೃಷಿ)

ಪ್ರಿಯ ಓದುಗರೇ,RAWEP ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವ ಜೊತೆಗೆ ಗ್ರಾಮೀಣ ಭಾಗದ ಕೃಷಿ ಅನುಭವ ಪಡೆಯಲು ಒಂದು ಉತ್ತಮ ವೇದಿಕೆಯಾಗಿರುತ್ತದೆ. ಕಾರ್ಯಕ್ರಮದ ಜೊತೆಯಲ್ಲಿ ಈ "ಕೃಷಿ ಸ್ಪರ್ಶ " ಸಂಚಿಕೆ ತರುವುದು ವಿದ್ಯಾರ್ಥಿಗಳಲ್ಲಿ ಮಾಹಿತಿ ಸಂಗ್ರ ಹಣೆ, ಸಂಕಲನ, ಪ್ರಕಟಣಾ ಕೌಶಲ್ಯ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ವಿದ್ಯಾರ್ಥಿಗಳ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.

- ಡಾ.ವೈ.ಎನ್.ಶಿವಲಿಂಗಯ್ಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕೃಷಿ ವಿಸ್ತರಣಾ ವಿಭಾಗ



**ಕೃಷಿ ಗ್ರಾಮೀಣ ಕಾರ್ಯಾನುಭವ ಕಾರ್ಯಕ್ರಮ**

- ಕೃಷಿಗೆ ಸಂಬಂಧಿಸಿದಂತೆ ಗ್ರಾಮೀಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುವುದು ಮತ್ತು ಸಂಬಂಧಿತ ಚಟುವಟಿಕೆಗಳು.
- ರೈತರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು ಮತ್ತು ಅವರ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಿತರಾಗುವಂತೆ ಮಾಡುವುದು.
- ನೈಜಕ್ಷೇತ್ರದ ಸನ್ನಿವೇಶಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ರೋಗನಿರ್ಣಯ ಮತ್ತ ಪರಿಹಾರ ಜ್ಞಾನವನ್ನು ನೀಡಲು ಪ್ರಾಯೋಗಿಕ ತರಬೇತಿ.
- ಇತ್ತೀಚಿನ ವಿಸ್ತರಣೆಯನ್ನು ಬಳಸಿಕೊಂಡು ರೈತರೊಂದಿಗೆ ವಿದ್ಯಾರ್ಥಿಗಳ ಪರಿಣಾಮಕಾರಿ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನದ ವರ್ಗಾವಣೆಯ ವಿಧಾನಗಳು.
- ಸಂಕೀರ್ಣ ಕೃಷಿ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸುವುದು.
- ಚಾಲ್ತಿಯಲ್ಲಿರುವ ವಿಸ್ತರಣೆ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವುದು.

## ಸುಂದರ ಹಳ್ಳಿಗೆ ಪಯಣ



ದಿನಕರ ಬಾನಂಚಿನಲ್ಲಿ ಮರೆಯಾಗುವ ವೇಳೆಗೆ ನಮ್ಮ ನೆಚ್ಚಿನ ಸುಂದರ ಅಚ್ಚುಮೆಚ್ಚಿನ ತಾಣ ಜಿಕೆವಿಕೆಯನ್ನು ಬಿಟ್ಟು ಹುಲಿಯೂರುದುರ್ಗದ ಕಾಡಿನ ಅಂಚಿನಲ್ಲಿರುವ ಸುಂದರ ಹಳ್ಳಿಗೆ ಸಂಜೆ ಪಯಣವನ್ನು ಬೆಳೆಸಿದವು ಹಾಗೂ ರಾತ್ರಿ ಹಳ್ಳಿಯನ್ನು ತಲುಪಿದೆವು.



# ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ

ಸ್ವಚ್ಛತೆ ಆರೋಗ್ಯಕರ ಜೀವನದ ಅವಿಭಾಜ್ಯ ಅಂಗ ಕೃಷಿ ವಿದ್ಯಾರ್ಥಿಗಳಾದ ನಾವು ಮೊದಲನೇ ದಿನವೇ ಹಳ್ಳಿಯ ಸರಕಾರಿ ಶಾಲೆ ಆವರಣವನ್ನು ಸ್ವಚ್ಛಗೊಳಿಸಿ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಶಾಲೆಯನ್ನು ಸುಂದರವಾಗಿ ಅಲಂಕರಿಸಲು ಚಿಣ್ಣರೊಡನೆ ಕೈಗೂಡಿಸಿದೆವು.









# ಅಮೃತ ಮಹೋತ್ಸವದಲ್ಲಿ-ನಮ್ಮ ಸಂಭ್ರಮ

ರಾವೇಗೆ ಆಗಮಿಸಿದ ಕೃಷಿ ವಿದ್ಯಾರ್ಥಿಗಳು 75ನೇ ಸ್ವಾತಂತ್ರ್ಯ ಮಹೋತ್ಸವಕ್ಕೆ ನಾವು ಅತಿಥಿಗಳಾಗದೆ ಹಳ್ಳಿಗರಲ್ಲಿ ಒಬ್ಬರಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡೆವು.ಊರಿನ ಚಿಣ್ಣರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದು ಮಾತ್ರವಲ್ಲದೆ ಮಕ್ಕಳಿಗೆ ಉಪಹಾರವನ್ನು ತಯಾರಿಸಲು ಅಡುಗೆಯವರ ಜೊತೆಯಾದೆವು. ಕೃಷಿ ವಿದ್ಯಾರ್ಥಿಗಳು ಕೃಷಿಗೆ ಮಾತ್ರ ಸೀಮಿತವಾಗದೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟವು.



# ಕೃಷಿ ಪ್ರಣತಿ

ಸಿರಿ ಪ್ರಗತಿ

RAWEP - 2022/23 ಕೆಂಚನಹಳ್ಳಿ ಸಂಚಿಕೆ- 1


## ಮೊದಲ ಗ್ರಾಮ ಸಭೆ

ಹಳ್ಳಿಗರಿಗೆ ನಮ್ಮ ವಾಸ್ತವ್ಯದ ಉದ್ದೇಶವನ್ನು ತಿಳಿಸಲು ಮತ್ತು ಅವರ ತೊಂದರೆಗಳನ್ನು ತಿಳಿಯಲು ಜನರೊಡನೆ ಬೆರೆಯಲು ಗ್ರಾಮ ಸಭೆಯನ್ನು ಹಾಲು ಉತ್ಪಾದಕರ ಸಂಘದ ಆವರಣದಲ್ಲಿ ಆಯೋಜಿಸಿದ್ದೆವು ಈ ಸಭೆಯಲ್ಲಿ ಜನರ ಸ್ಪಂದನೆ ಮತ್ತು ಸಹಕಾರವು ಅತ್ಯುತ್ತಮ ಮಟ್ಟದಲ್ಲಿತ್ತು,ಹಾಗೆ ಹಳ್ಳಿಗರು ನಮ್ಮ ಮೇಲೆ ಇಟ್ಟಿರುವ ಭರವಸೆ ಮತ್ತು ಭಾವನೆಯನ್ನು ತಿಳಿದು ನಾವು ಮನಸೋತೆವು



## ಭತ್ತದ ನಾಟಿ -ನಮ್ಮ ಬದುಕಿನ ದಾಟಿ



ನಾಟಿ ಮಾಡುವುದು ರೈತರಿಗೆ ಹೊಸದಲ್ಲ ಆದರೆ ಕೆಸರುಗದ್ದೆಗಳಲ್ಲಿ ಕಾಲಿಟ್ಟು ರೈತರೊಡನೆ ನಾವು ಒಂದಾಗಿ ನಾಟಿ ಮಾಡುವುದು ನಮಗೆ ಹೊಸ ಅನುಭವದಂತೆ ಭಾಸವಾಯಿತು.ಈ ಸಮಯದಲ್ಲಿ ರೈತರುಮತ್ತು ಕೃಷಿ ಕಾರ್ಮಿಕರ ಜೊತೆಗಿನ ಮಾತುಗಳು ಅವರ ಜೀವನದ ಕಷ್ಟಗಳು ನಮಗೆ ನಮ್ಮ ಜೀವನವನ್ನು ಅರಿಯುವಂತೆ ಮಾಡಿತು.



# ರೇಷ್ಮೆ-ನಮ್ಮೂರ ಹೆಮ್ಮೆ

ಕೆಂಚನಹಳ್ಳಿ ಗ್ರಾಮದಲ್ಲಿ ಸುಮಾರು ಮುನ್ನೂರ ಐವತ್ತು ಮನೆಗಳಿದ್ದು ಅದರಲ್ಲಿ ಸುಮಾರು 200 ಕುಟುಂಬಗಳು ರೇಷ್ಮೆಯನ್ನೇ ಪ್ರಮುಖ ಆದಾಯದ ಮೂಲವನ್ನಾಗಿಸಿಕೊಂಡಿವೆ,
ಅದರಲ್ಲೂ ವಿಶೇಷವೆಂದರೆ ಅತ್ಯುತ್ತಮ ಮಟ್ಟದ ಬಿತ್ತನೆಯ ನಾಟಿ ಗೂಡುಗಳ ಉತ್ಪಾದನೆಯಲ್ಲಿ ಕೆಂಚನಹಳ್ಳಿಯು ತನ್ನದೇ ಆದ ಛಾಪುನ್ನು ಮೂಡಿಸಿದೆ ನಮ್ಮ ಹಳ್ಳಿಯಲ್ಲಿನ ರೇಷ್ಮೆ ಕೃಷಿಕರ ಮನೆಗಳಲ್ಲಿ ಹಲವಾರು ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ಸಿರಿವಂತ ರೇಷ್ಮೆ ಬೆಳೆಯ ಬಗ್ಗೆ ಪ್ರಾಯೋಗಿಕ ಅನುಭವವನ್ನು ಪಡೆಯುತ್ತಿರುವುದು ಖುಷಿಯ ವಿಷಯ.





# ಆಂಜನೇಯನ ಆಶೀರ್ವಾದದೊಂದಿಗೆ ನಡೆದ ಎರಡನೇ ಸಭೆ



ಗ್ರಾಮ ಸಭೆ ಗುಂಪು ಚರ್ಚೆ ವಿಸ್ತರಣಾ ಶಿಕ್ಷಣದ ಪ್ರಮುಖ ಶೈಕ್ಷಣಿಕ ಸಾಧನೆಗಳು ಅಂತೆಯೇ ನಾವು ಗ್ರಾಮದ ಆಂಜನೇಯ ದೇವಾಲಯದ ಮುಂಭಾಗ "ಮಣ್ಣಿನ ಪರೀಕ್ಷೆಯ ಮಹತ್ವ ಮತ್ತು ಮಣ್ಣಿನ ಮಾದರಿ ಸಂಗ್ರಹಣೆಯ" ಕುರಿತು ಗುಂಪು ಸಭೆ ಮತ್ತು ಚರ್ಚೆಯನ್ನು ಆಯೋಜಿಸಿದ್ದೆವು ಇದರಲ್ಲಿ ಹಳ್ಳಿಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಿದರು ಆದರೆ ಇದುವರೆಗೆ ಹಳ್ಳಿಯ ಯಾವ ಕೃಷಿಕರ ಜಮೀನಿನಲ್ಲಿ ಮಣ್ಣು ಪರೀಕ್ಷೆ ನಡೆದಿಲ್ಲವೆಂದು ತಿಳಿದು ನಮ್ಮ ವ್ಯವಸ್ಥೆಯ ಕುರಿತು ಬೇಸರವಾಯಿತು.
ಇದಾದ ನಂತರ ಮುಂಜಾನೆ ಎಲ್ಲಾ ವಿದ್ಯಾರ್ಥಿಗಳು ರೈತರ ಜಮೀನುಗಳಿಗೆ ಭೇಟಿ ನೀಡಿ ಅವರ ಸಮ್ಮುಖದಲ್ಲಿ ಮಾದರಿಗಳನ್ನು ಸಂಗ್ರಹಿಸಿದರು.

# ಮಾಹಿತಿ ಸಂಗ್ರಹಣೆ

ಹಳ್ಳಿಯ ಹಾಗೂ ರೈತರ ಸ್ಥಿತಿಗತಿಯನ್ನು ತಿಳಿಯಲು ಮತ್ತು ಅವರೊಡನೆ ಬಾಂಧವ್ಯವನ್ನು ಬೆಳೆಸಲು ಈ ಮಾಹಿತಿ ಸಂಗ್ರಹಣೆಯು ನಮ್ಮ ಪ್ರಮುಖ ಸಾಧನವಾಯಿತು ಅವರ ಆತಿಥ್ಯವು ನಮ್ಮನ್ನು ಅಚ್ಚರಿಗೊಳಿಸಿತು.

